# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 169(255) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೈಗಾರಿಕಾ ಪ್ರದೇಶದ ಕಟ್ಟಡ ಹಾಗೂ ಇತರೆ ಸ್ಥಾವರ ನಿರ್ಮಾಣಗಳಿಗೆ ಸ್ಥಳೀಯ ಸಂಸ್ಥೆಗಳು ತೆರಿಗೆ ವಿಧಿಸಲು ಅವಕಾಶ ಇದೆಯೇ; ಈ ಕುರಿತ ನಿಯಮಗಳು ಯಾವುವು; ಪ್ರಸ್ತುತ ಕೈಗಾರಿಕಾ ಪ್ರದೇಶ ಹಾಗೂ ಕೆಐಡಿಬಿ ಮೂಲಕ ವಿವಿಧ ಕೈಗಾರಿಕೆಗಳಿಗೆ ನೀಡಿದ ಕಟ್ಟಡ ಸ್ಥಳ ಹಾಗೂ ಶೆಡ್ಡುಗಳಿಗೆ ತೆರಿಗೆಯನ್ನು ವಸೂಲು ಮಾಡಲಾಗುತ್ತಿದೆಯೇ; ಆ ತೆರಿಗೆಯಲ್ಲಿ ಎಷ್ಟು ಪಾಲನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದೆ; ಕೆಲವು ಕೈಗಾರಿಕೆಗಳು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಕಟ್ಟಡ ತೆರಿಗೆ ಪಾವತಿಸದಿರುವ ಬಗ್ಗೆ ಸ್ಥಳೀಯ ಸಂಸ್ಥೆಗಳಿಂದ ದೂರುಗಳು ಬಂದಿದೆಯೇ ; (ವಿವರ ನೀಡುವುದು) | ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಗುತ್ತಿಗೆ ಕರಾರು ಪತ್ರದ ನಿಯಮದಂತೆ ಉದ್ದಿಮೆದಾರರು ಆಸ್ತಿ ತೆರಿಗೆಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಪಾವತಿಸುವಂತೆ ಷರತ್ತು ವಿಧಿಸಲಾಗಿರುತ್ತದೆ.<br><br>ಅದರಂತೆ ಸ್ಥಳೀಯ ಸಂಸ್ಥೆಗಳು ನಿಯಮಾನುಸಾರ ಕೈಗಾರಿಕಾ ನಿವೇಶನ ಹಾಗೂ ಕಟ್ಟಡಗಳಿಗೆ ತೆರಿಗೆಯನ್ನು ಸಂಗ್ರಹಿಸುತ್ತವೆ. ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ಸ್ಥಳೀಯ ಸಂಸ್ಥೆಗಳೇ ಇಟ್ಟುಕೊಳ್ಳುತ್ತವೆ.<br><br>ಕೈಗಾರಿಕಾ ಪ್ರದೇಶಗಳಲ್ಲಿ ಯಾವುದಾದರೂ ಕೈಗಾರಿಕೆಗಳು ಆಸ್ತಿ ತೆರಿಗೆಯನ್ನು ಪಾವತಿ ಮಾಡದಿದ್ದಲ್ಲಿ, ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಅಂತಹ ಕೈಗಾರಿಕೆಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುತ್ತವೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಕೆಐಡಿಬಿ ಯ ಕೈಗಾರಿಕಾ ಪ್ರದೇಶಗಳು ಯಾವುವು; ಸದರಿ ಕೈಗಾರಿಕೆಗಳು ಹಾಗೂ ಕೈಗಾರಿಕಾ ಪ್ರದೇಶಗಳು ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯತಿಗಳು ಇತ್ಯಾದಿಗಳಿಂದ ಕಟ್ಟಡ ಪರವಾನಿಗೆ ಇತ್ಯಾದಿಗಳನ್ನು ಪಡೆದು ತೆರಿಗೆ ಪಾವತಿ ಮಾಡಲಾಗುತ್ತಿದೆಯೇ; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ಕೆಳಕಂಡ ಕೈಗಾರಿಕಾ ಪ್ರದೇಶಗಳಿವೆ : |
| ಇ) | ಕೈಗಾರಿಕೆಗಳು ಕಟ್ಟಡ ತೆರಿಗೆ ಸ್ಥಳೀಯ ಸಂಸ್ಥೆಗಳಿಗೆ ಪಾವತಿಸದಿರುವುದರಿಂದ ಈ ಕಟ್ಟಡಗಳ ಮೇಲೆ | |

| ಕ್ರ. ಸಂ | ಕೈಗಾರಿಕಾ ಪ್ರದೇಶ | ಎಕರೆ |
|---|---|---|
| | **ದಕ್ಷಿಣ ಕನ್ನಡ ಜಿಲ್ಲೆ** | |
| 1. | ಬೈಕಂಪಾಡಿ ಕೈ.ಪ್ರ | 541.49 |
| 2. | ಕಾನಾ೯ಡು ಕೈ.ಪ್ರ | 65.85 ಎಕ್ರೆ |
| 3. | ತಣ್ಣೀರುಬಾವಿ ಕೈ.ಪ್ರ | 124.00 ಎಕ್ರೆ |
| 4. | ಪುತ್ತೂರು ಕೈ.ಪ್ರ | 21.40 |

<table>
<tr>
<td></td>
<td>ನಿಯಂತ್ರಣ ಹೊಂದಿಲ್ಲದಿರುವುದರಿಂದ ಯಾವುದೇ ಸಮಸ್ಯೆಗಳಾದಾಗ ಕ್ರಮ ಕೈಗೊಳ್ಳಲು ಅವಕಾಶ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಯಮಗಳು ಯಾವುವು;</td>
<td>
<table>
<tr><td>5.</td><td>ಇ.ಪಿ.ಐ.ಪಿ. ಕೈ.ಪ್ರ</td><td>205.16</td></tr>
<tr><td>6.</td><td>ಕೆನರಾ ಪ್ಲಾಸ್ಟಿಕ್ ಪಾರಂ, ಗಂಜಿಮಠ ಕೈ.ಪ್ರ</td><td>104.28</td></tr>
<tr><td>7.</td><td>IT-SEZ ಕೈ.ಪ್ರ</td><td>81.19</td></tr>
<tr><td>8.</td><td>Non-SEZ ಕೈ.ಪ್ರ</td><td>64.93</td></tr>
<tr><td>9.</td><td>ಕೆನರಾ ಕೈ.ಪ್ರ, ಮುಡಿಪು.</td><td>585.66</td></tr>
</table>
<table>
<tr><td colspan="3">ಉಡುಪಿ ಜಿಲ್ಲೆ</td></tr>
<tr><td>1.</td><td>ಶಿವಳ್ಳಿ ಕೈ.ಪ್ರ</td><td>90.00</td></tr>
<tr><td>2.</td><td>ನಂದಿಕೂರು ಕೈ.ಪ್ರ</td><td>86.64</td></tr>
<tr><td>3.</td><td>ಬೆಳಪು ಕೈ.ಪ್ರ</td><td>68.00</td></tr>
<tr><td>4.</td><td>ಮಿಯಾರು ಕೈ.ಪ್ರ</td><td>20.00</td></tr>
</table>
ಹಂಚಿಕೆ ಮಾಡಲಾದ ಉದ್ದಿಮೆದಾರರು ಘಟಕ ಪ್ರಾರಂಭಿಸುವ ಮುನ್ನ ಮಂಡಳಿಯಿಂದ ಕಟ್ಟಡ ನಕ್ಷೆಗೆ ಅನುಮತಿ ಪಡೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ Supervision ಶುಲ್ಕ ಮತ್ತು Labour Cess ಅನ್ನು ಸಂಗ್ರಹಿಸಿ ಸಂಬಂಧಪಟ್ಟ ಇಲಾಖೆಗೆ ಪಾವತಿಸಲಾಗುತ್ತದೆ.<br><br>
ಆಸ್ತಿ ತೆರಿಗೆಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ನಿಯಮಾನುಸಾರ ಸಂಗ್ರಹಿಸುತ್ತವೆ. ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ಸ್ಥಳೀಯ ಸಂಸ್ಥೆಗಳೇ ಇಟ್ಟುಕೊಳ್ಳುತ್ತವೆ.<br><br>
ಕೈಗಾರಿಕಾ ಘಟಕಗಳು ಆಸ್ತಿ ತೆರಿಗೆಯನ್ನು ಪಾವತಿಸದಿದ್ದಲ್ಲಿ, ಸ್ಥಳೀಯ ಸಂಸ್ಥೆಗಳು ತಮ್ಮ ಕಾಯ್ದೆಗಳನುಸಾರ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ.
</td>
</tr>
<tr>
<td>ಈ)</td>
<td>ಎಸ್ಇಝೆಡ್ ವ್ಯಾಪ್ತಿಯ ಕೈಗಾರಿಕಾ ಕಟ್ಟಡಗಳಿಗೆ ತೆರಿಗೆ ವಿನಾಯಿತಿ ಇದೆಯೇ ; ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಎಸ್ಇಝೆಡ್ ವ್ಯಾಪ್ತಿಯ ಕೈಗಾರಿಕಾ ಕಟ್ಟಡಗಳಿಗೆ ತೆರಿಗೆ ವಿಧಿಸಲಾಗುತ್ತಿದೆಯೇ ; ಅಥವಾ ಇಲ್ಲವೇ? (ವಿವರ ನೀಡುವುದು)</td>
<td>ಎಸ್ಇಝೆಡ್ ವ್ಯಾಪ್ತಿಯ ಕೈಗಾರಿಕಾ ಕಟ್ಟಡಗಳಿಗೆ ಯಾವುದೇ ಆಸ್ತಿ ತೆರಿಗೆ ವಿನಾಯಿತಿ ನೀಡುವುದಿಲ್ಲ.</td>
</tr>
</table>

**ಸಂಖ್ಯೆ: ಸಿಐ 235 ಐಎಪಿ 2024**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು